


ಎಡದಿಂದ ಬಲಕ್ಕೆ:

1. ವಾರಗಟ್ಟಳೆ ಕಾದು ಕುಳಿತಿತ್ತು ನೋಡಿ ಸರೀಸೃಪ (3)
3. ಸರಗಳಿಗೆ ಕೊಂಬುಗೂಡಿಸಿ ಕಚ್ಚಿದಾಗ–ನಾಲಿಗೆಗೆ ಒಳ್ಳೇ ಹಿತ (3)
4. ಪಟಾಕಿ ಸುಟ್ಟಿದ್ದು ಇದೇ ಚಿತ್ರಮಂದಿರ (3)
6. ಥರ ಥರ ನಡುಗಿಸುವಂಥ ಹೆದರಿಕೆ (3)
7. ಮನಸಿನಲ್ಲಿದ್ದಂತೆಯೇ ಇಲ್ಲಿ ಯಾವುದೂ ಹೆಚ್ಚು ಕಡಿಮೆ ಇಲ್ಲ (4)
9. ಗುಮಾನಿ ಬರಿಸುವವರ ಮೇಲೆ ಕಣ್ಣಿಡು (4)
11. ಕಾಣಿಕೆಯ ಲೆಕ್ಕ ಬರೆಯಲು ಬೇಕಾದದ್ದು? (4)
13. ವಿವರವನ್ನೆಲ್ಲ ತಿಳಿಯಲು 'ಸೂರ್ಯನ ದಿನ'ವೇ ಸರಿ (4)
15. ಮುರುಕು ಸಾಮಾನುಗಳದೇ ವಿಧ ವಿಧ (3)
17. ಆರಿಸಿದ್ದನ್ನೆಲ್ಲ ಒಮ್ಮೆ ತೊಟ್ಟು ನೋಡಿ (3)
18. ಸಾಗರದ ಕಡೆಯಿಂದ ಎಂಥ ಹಿತಕರ ಪರಿಮಳ (3)
19. ಕೊಳಕನ್ನೆಲ್ಲ ಹೊರತೆಗೆದು ಸೇರಿಸು, ಬೆರೆಸು (3)

ಮೇಲಿಂದ ಕೆಳಕ್ಕೆ:

1. ವಂಚಿತರಿಗೆ ಸಹಾಯ ನೀಡುವ ಸೇವೆಗೆ ಶುಲ್ಕ ಏನಿಲ್ಲ (3)
2. ಗುಂಟೂರಿನಲ್ಲಿ ನೋಡಿ ಎಂಥ ದೊಡ್ಡ ಚರಂಡಿ (3)
3. ಮನಸನ್ನೇ ಬದಲಿಸಬಲ್ಲಂಥ ಸುಂದರ ಹೂವು (3)
5. ಸಂಗಮದತ್ತ ಪಯಣ – ಯಾವ ಕಷ್ಟವೂ ಇಲ್ಲ (3)
7. ಸುಮ್ಮನಿರಲೆಂದು ಕೊಟ್ಟಿದ್ದು ಕಂಠಾಭರಣ–ಹಾರ (4)
8. ತೆಳ್ಳಗಾಯಿತೇಕೆ? ಅದಕ್ಕೇ ಈ ನಿಂದನೆ (4)
9. ಗೋಡೆ ಯಾರದ್ದೇ ಆಗಿರಲಿ, ಕಾಲಯಂತ್ರ ಅದೇ (4)
10. ಸುಂದರಾಕಾರನಿಗೆ ಕಂಡದ್ದು 'ಅಮೃತದ ಮೂಲ' (4)
12. ದಣಿದು ಬಂದವರಿಗೆ ಭೂಮಿಯೇ ತಲೆಕೆಳಗು (3)
14. ವರದಿಯ ವಿವರ ಕುರಿತು ಈ ಪ್ರತಿಭಟನೆ (3)
15. ಕರೆಸಿದೊಡನೆಯೇ ಹಾಜರಾದ ನೋಡಿ ಶೃಂಗಾರಪ್ರಿಯ (3)
16. ಕುಸುಮ ರಾಶಿಯನ್ನು ಮುಚ್ಚಿಡಲೊಂದು ಪರದೆ (3)

## ಪದಬಂಧ: 22-7-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅದ್ವಿತೀಯ; 3. ಗರಡಿ; 7. ಮಾನಧನ; 8. ಮಹೇಶ; 9. ಪಾಪ; 12. ನೆಪ; 14. ಸಂಶಯ; 15. ತಡಸಲು; 17. ಅವನಿ; 18. ಧನ ಧಾನ್ಯ.

ಮೇಲಿಂದ ಕೆಳಕ್ಕೆ:

1. ಅಡಿ; 2. ತೀರ್ಮಾನ; 4. ರವಿಶಶಿ; 5. 'ಕನಪಾ' (ಪಾನಕ ತಲೆಕೆಳಗು); 6. ಸಮರ್ಥನೆ; 10. ಪಲಾಯನ; 11. ಅಸಂಭವ; 13. ಪತನ; 16. ಸದನ; 17. ಅನ್ನ.

# ವೃಕ್ಷ ವಿಶೇಷ

## ಯಾವ ಮರ–ಅತ್ಯಂತ ಎತ್ತರ?

'ಸೆಕ್ವೋಯಾ ಸೂಪರ್ ವೈರೆನ್ಸ್' ಎತ್ತರ ಬೆಳೆಯುವ ಸಾಮರ್ಥ್ಯದಲ್ಲಿ ಈ ವೃಕ್ಷ ಅದ್ವಿತೀಯ. ಇಡೀ ಧರೆಯಲ್ಲಿ ಅತ್ಯಂತ ಎತ್ತರ ಬೆಳೆದು ನಿಂತಿರುವ ವೃಕ್ಷ ಪ್ರಭೇದವೂ ಇದೇ.

'ಸೆಕ್ವೋಯಾ' ವೃಕ್ಷ ವರ್ಗದಲ್ಲಿ ಎರಡು ಪ್ರಭೇದಗಳಿವೆ: 'ಸೆಕ್ವೋಯಾ ಜೈಗಾಂಟಿಯಾ ಮತ್ತು ಸೆಕ್ವೋಯಾ ಸೂಪರ್ ವೈರೆನ್ಸ್' ವಿಸ್ಮಯ ಏನೆಂದರೆ ಈ ಎರಡು ಪ್ರಭೇದಗಳೂ ವಿಶ್ವದಾಖಲೆಯ ವೀರರಾಗಿವೆ. ಮೊದಲಿನದು ದೈತ್ಯ ಗಾತ್ರದಲ್ಲೂ, ಎರಡನೆಯದು ಅತ್ಯಂತ ಉನ್ನತಿಯಲ್ಲೂ ದಾಖಲೆ ಸೃಷ್ಟಿಸಿವೆ.

'ಬಿಗ್ ಟ್ರೀಸ್' ಎಂದೇ ಕರೆಯಲಾಗುವ 'ಸೆಕ್ವೋಯಾ ಜೈಗಾಂಟಿಯಾ 'ವೃಕ್ಷಗಳ ಗಾತ್ರ ಕಲ್ಪನಾತೀತ. ಈ ಗುಂಪಿನದೇ 'ಜನರಲ್ ಶರ್ಮಾನ್' ಎಂಬ ವೃಕ್ಷದ ಕಾಂಡ ಒಂದುನೂರ ಒಂದು ಅಡಿ ಏಳು ಅಂಗುಲ ಸುತ್ತಳತೆ ಪಡೆದು, ಇನ್ನೂರ ಎಪ್ಪತ್ತೆರಡು ಅಡಿ ಎತ್ತರವಿದ್ದು ಅದರ ಒಟ್ಟು ಅಂದಾಜು ತೂಕ ಎರಡು ಸಾವಿರದ ಒಂದು ನೂರ ನಲವತ್ತೈದು ಟನ್! ಎಂಥ ಗಾತ್ರ, ಎಂಥ ತೂಕ! ಎರಡಲ್ಲೂ ಇದೇ ವಿಶ್ವದಾಖಲೆ.

ಹಾಗೆಯೇ 'ರೆಡ್‌ವುಡ್ಸ್' ಎಂದು ಕರೆಯಲಾಗುವ 'ಸೆಕ್ವೋಯಾ ಸೂಪರ್‌ವೈರೆನ್ಸ್' ವೃಕ್ಷಗಳ (ಚಿತ್ರ ನೋಡಿ) ಎತ್ತರವನ್ನು ನೇರ ನೋಡಿದರೂ ನಂಬಲಾಗುವುದಿಲ್ಲ. ಇಸವಿ 2006 ರಲ್ಲಿ ಪತ್ತೆಯಾದ ಈ ಪ್ರಭೇದದ ಒಂದು ಗಗನಚುಂಬಿ ವೃಕ್ಷದ ಎತ್ತರ ಮುನ್ನೂರ ಎಪ್ಪತ್ತೊಂಬತ್ತು ಅಡಿ ಒಂದು ಅಂಗುಲ! ಎಂದರೆ ಸುಮಾರು ನಲವತ್ತೈದು ಮಹಡಿಗಳಷ್ಟು ಎತ್ತರ! 'ಹೈಪರಿಯಾನ್' ಎಂಬ ಹೆಸರಿನ ಈ ವೃಕ್ಷದ್ದೇ ಉನ್ನತಿಯಲ್ಲಿ ಈ ವರೆಗಿನ ವಿಶ್ವದಾಖಲೆ.



ವಿಶೇಷ ಏನೆಂದರೆ ಸೆಕ್ವೋರಿಯಾ ವೃಕ್ಷಗಳ ಎರಡೂ ಪ್ರಭೇದಗಳು ಉತ್ತರ ಅಮೆರಿಕ ಖಂಡದ ಅದರಲ್ಲೂ ಯು.ಎಸ್.ಎ.ಯ ಪಶ್ಚಿಮ ಕರಾವಳಿಗಷ್ಟೇ ಸೀಮಿತ. ಅಲ್ಲಿ ಹಬ್ಬಿರುವ 'ಸಿಯೆರ್ರಾ ನಿವ್ಯಾಡಾ' ಪರ್ವತ ಪಂಕ್ತಿಯ ಪಶ್ಚಿಮದ ಇಳುಕಲಿನುದ್ದಕ್ಕೂ ಕಿಕ್ಕಿರಿದು ಬೆಳೆದು ನಿಬಿಡ ಕಾನನವನ್ನೇ ರೂಪಿಸಿದ್ದ ಈ ವೃಕ್ಷಗಳು ಶತಮಾನಗಳಿಂದ ಮನುಷ್ಯರ ಗರಗಸಕ್ಕೆ ಸಿಕ್ಕಿ ಹಾಗೆ ಅಳಿದುಳಿದಿರುವ ವೃಕ್ಷಗಳು ಈಗ ಸಂಪೂರ್ಣ ರಕ್ಷಿಸಲ್ಪಟ್ಟಿವೆ. 'ರೆಡ್‌ವುಡ್ ರಾಷ್ಟ್ರೀಯ ಉದ್ಯಾನ'ವೊಂದರಲ್ಲೇ ಮುನ್ನೂರೈವತ್ತು ಅಡಿ ಎತ್ತರ ತಲುಪಿರುವ ಒಂದು ನೂರ ಎಂಬತ್ತು ವೃಕ್ಷಗಳಿವೆ. ಒಂದು ವೃಕ್ಷ 367 ಅಡಿ 9–1/2 ಅಂಗುಲ ಎತ್ತರ ಇದೆ. 'ಹೈಪರಿಯಾನ್'ದು ಅದನ್ನೂ ಮೀರಿದ ಉನ್ನತಿ. ಸೆಕ್ವೋಯಾ ವೃಕ್ಷಗಳ ಆಯುಷ್ಯವೂ ಬಹು ದೀರ್ಘ. ಈಗಿರುವ ಈ ವರ್ಗದ ಬೇಕಾದಷ್ಟು ವೃಕ್ಷಗಳ ವಯಸ್ಸು ನಾಲ್ಕೂವರೆ ಸಾವಿರ ವರ್ಷ ಮೀರಿದೆ. ಹಾಗೇ ಬಿಟ್ಟರೆ ಈ ವೃಕ್ಷ ಆರು ಸಾವಿರ ವರ್ಷ ಬದುಕಬಲ್ಲದು ಎಂದು ತಜ್ಞರು ಅಂದಾಜಿಸಿದ್ದಾರೆ.

■ ಎನ್. ವಾಸುದೇವ್